ಪ್ರದೇಶದ ಫಲಾನುಭವಿಗಳಿಗೆ ಪುನರ್ವಸತಿ ಕಲ್ಪಿಸಿಕೊಡುವ ಸಲುವಾಗಿ ಮನೆಗಳನ್ನು ಕಟ್ಟಲಾಗಿದ್ದು, ಇದಕ್ಕೆ ಸಾಲದ ಮೊತ್ತ 28,000 ರೂಪಾಯಿಗಳಿವೆ. ಒಟ್ಟಾರೆ ಈ ಸಾಲದ ಮೊತ್ತಕ್ಕೆ ಫಲಾನುಭವಿಗಳು ಮುದ್ರಾಂಕ ಹಾಗೂ ನೋಂದಣಿ ಫೀ ವಿನಾಯಿತಿ ನೀಡುವ ಸಲುವಾಗಿ ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡಿದೆ. ಮುದ್ರಾಂಕ ಹಾಗೂ ನೋಂದಣಿ ಫೀಯಲ್ಲಿ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ಈಗಾಗಲೇ ಯೋಜಿಸಿದಂತೆ, ಆಶ್ರಯ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ 91,000 ಮನೆಗಳನ್ನು, ನಗರ ಪ್ರದೇಶಗಳ ಮಟ್ಟದಲ್ಲಿ 15,000 ಮನೆಗಳನ್ನು ಹಾಗೂ ಅಂಬೇಡ್ಕರ್ ಶತಮಾನೋತ್ಸವ ಅಂಗವಾಗ ನಗರ ಮಟ್ಟದಲ್ಲಿ 10,000 ಮನೆಗಳನ್ನು ಮತ್ತು ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 30,000 ಮನೆಗಳನ್ನು ಕಟ್ಟಲು ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ಒಟ್ಟು ಅಂದಾಜು 20 ಕೋಟಿ ರೂಪಾಯಿಗಳು ತಗುಲುತ್ತಿದ್ದು, ಈ ಶುಲ್ಕ ಪಾವತಿ ಬಗ್ಗೆ ಸರ್ಕಾರ ಈ ದಿನ ಸಂಪೂರ್ಣ ವಿನಾಯಿತಿ ನೀಡಿದೆ. ತತ್ಸಂಬಂಧ, ಅವಶ್ಯ ಆದೇಶ ಹೊರಡಿಸಲಾಗುವುದು.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ಸಾಮಾನ್ಯ ಜನರ ಈ ಒಂದು ಕಷ್ಟವನ್ನು ಅರ್ಥಮಾಡಿಕೊಂಡು ನಮ್ಮ ಸರ್ಕಾರದವರು ತೀರ್ಮಾನ ತೆಗೆದುಕೊಂಡಿರುವುದಕ್ಕೆ ನಾನು ದುರ್ಬಲವರ್ಗದವರೆಲ್ಲರ ಪರವಾಗಿ ಅಭಿನಂದಿಸುತ್ತೇನೆ ಮತ್ತು ಆಭಾರಿ ಆಗಿದ್ದೇನೆ.

(2) ಐದು ವರ್ಷಗಳ ಸೇವೆ ಪೂರ್ಣಗೊಂಡ ದಿನಗೂಲಿ ತೋಟಗಾರರಿಗೆ ಮಾಸಿಕ ವೇತನ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, "ಐದು ವರ್ಷಗಳ ಸೇವೆ ಪೂರ್ಣಗೊಂಡ ದಿನಗೂಲಿ ತೋಟಗಾರರಿಗೆ ಮಾಸಿಕ ವೇತನ ಕೊಡುವ ಬಗ್ಗೆ ಹಾಗೂ ತೋಟಗಾರರಿಗೆ ಬಡ್ತಿ ನೀಡುವ ಬಗ್ಗೆ ತೋಟಗಾರಿಕಾ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ಶ್ರೀ ಎ. ಕೃಷ್ಣಪ್ಪ (ತೋಟಗಾರಿಕಾ ರಾಜ್ಯ ಸಚಿವರು) :

ಮಾನ್ಯ ಅಧ್ಯಕ್ಷರೆ,

ತೋಟಗಾರಿಕೆ ಇಲಾಖೆಯಲ್ಲಿ ದಿನಾಂಕ : 1-7-84ಕ್ಕಿಂತ ಮುಂಚೆ ಕೆಲಸಕ್ಕೆ ಸೇರಿದ 2834 ಜನ ದಿನಗೂಲಿ ನೌಕರರಿದ್ದಾರೆ. ಇವರಲ್ಲಿ ಈವರೆಗೆ 2794 ಜನರನ್ನು ಮಾಸಿಕ ವೇತನ ಕೆಲಸಗಾರರನ್ನಾಗಿ ಪರಿವರ್ತಿಸಲಾಗಿದೆ. ದಿನಗೂಲಿ ನೌಕರರನ್ನು ಮಾಸಿಕ ವೇತನ ದಿನಗೂಲಿ ನೌಕರರನ್ನಾಗಿ ಪರಿವರ್ತಿಸಲು ಸರ್ಕಾರವು ರೂಪಿಸಿರುವ ಮಾರ್ಗಸೂಚಿಗಳು: ನಿಯಮಗಳು ನಿಗಧಿಪಡಿಸಿರುವ ಷರತ್ತುಗಳನ್ನು ಪೂರೈಸದೇ ಇರುವ ಕಾರಣ 40 ಜನ ದಿನಗೂಲಿ ನೌಕರರನ್ನು ಮಾತ್ರ ಮಾಸಿಕ ವೇತನದಡಿಯಲ್ಲಿ ಪರಿವರ್ತಿಸಿರುವುದಿಲ್ಲ.

ದಿನಾಂಕ: 1-12-90ಕ್ಕೆ 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ 1799 ಜನ ನೌಕರರನ್ನು ಖಾಯಂಗೊಲಿಸಲಾಗಿದೆ. ದಿನಾಂಕ: 31-12-91ಕ್ಕೆ 10 ವರ್ಷಗಳ ನಿರಂತರ ಸೇವೆ ಸಲ್ಲಿಸಿದ 150 ದಿನಗೂಲಿ ನೌಕರರು, ದಿನಾಂಕ : 31-12-92ಕ್ಕೆ 10 ವರ್ಷಗಳ ಪೂರ್ಣ ಸೇವೆ ಸಲ್ಲಿಸಿದ 190 ದಿನಗೂಲಿ ನೌಕರರು,

ಒಟ್ಟು 340 ಮಾಸಿಕ ವೇತನ ನೌಕರರ ಸೇವೆಯನ್ನು ಸಕ್ರಮಗೊಳಿಸಲು ತೀವ್ರ ಪರಿಶೀಲನೆ ನಡೆಸಿದ್ದು ಸದ್ಯದಲ್ಲೆ ಆದೇಶ ಹೊರಡಿಸಲಾಗುತ್ತಿದೆ.

ತೋಟಗಾರರ ಹುದ್ದೆಯಿಂದ ತೋಟಗಾರಿಕೆ ಸಹಾಯಕರ ಹುದ್ದೆಗೆ ಸೇವಾ ಮುಂಬಡ್ತಿ ನೀಡಬೇಕಾದರೆ ಇಲಾಖೆಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವೃಂದ ಮತ್ತು

ನೇಮಕಾತಿ ನಿಯಮಗಳ ಪ್ರಕಾರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ತೋಟಗಾರಿಕೆ ತರಬೇತಿಯನ್ನು ಪಡೆದಿರಬೇಕು ಹಾಗೂ ಕನಿಷ್ಟ 3 ವರ್ಷಗಳ ನಿರಂತರ ಸೇವೆ ಸಲ್ಲಿಸಿರಬೇಕು. ತೋಟಗಾರಿಕೆ ತರಬೇತಿ ಪಡೆದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾಗದ ತೋಟಗಾರರು ಆ ಹುದ್ದೆಯಲ್ಲಿ ಕನಿಷ್ಠ 10 ವರ್ಷಗಳ ಸೇವೆ ಸಲ್ಲಿಸಿರಬೇಕಾಗುತ್ತದೆ. ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರದ ಹಾಗೂ ತೋಟಗಾರಿಕೆ ತರರಬೇತಿ ಪಡೆಯದೇ ಇರುವ ಬಹಳಷ್ಟು ಜನ ನೌಕರರು ತೋಟಗಾರರಾಗಿ 15-20 ವರ್ಷಗಳಿಂದ ಮುಂಬಡ್ತಿ ಇಲ್ಲದೇ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇಲಾಖಾ ವತಿಯಿಂದ ಸದರಿ ನೌಕರರಿಗೆ 10 ತಿಂಗಳ ತರಬೇತಿ ಪಡೆಯಲು ನಿಯೋಜಿಸಿದಲ್ಲಿ ಇಲಾಖಾ ಕೆಲಸಗಳಿಗೆ ಧಕ್ಕೆ ಉಂಟಾಗುವ ಸಂಭವವಿದೆ. 15-20 ವರ್ಷಗಳಿಗಿಂತ ಹೆಚ್ಚಾಗಿ ತೋಟಗಾರರಾಗಿ ಸೇವೆ ಸಲ್ಲಿಸಿರುವ ನೌಕರರು ಸಾಮಾನ್ಯವಾಗಿ ಅವರು ನಿರಂತರ ಸೇವೆಯಿಂದ ಹೊಂದಿರುವ ಅನುಭವದಿಂದ ತೋಟಗಾರಿಕೆಯಲ್ಲಿ ಪರಿಣತಿ ಹೊಂದಿರುತ್ತಾರೆ. ಇಂತಹ ನೌಕರರ ದೀರ್ಘಾವಧಿ ಸೇವೆಯನ್ನು ತರಬೇತಿಗೆ ಸಮಾನ ಎಂದು ಪರಿಗಣಿಸಿ ಇಂತಹ ನೌಕರರಿಗೆ ಸೇವಾ ಮುಂಬಡ್ತಿ ನೀಡುವ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತಿದೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಿಂದ ಈ ವರ್ಗದ ನೌಕರರಿಗೆ ಯಾವುದೇ ರೀತಿಯಲ್ಲಿ ಅನುಕೂಲವಾಗುತ್ತಿಲ್ಲ. ಕಳೆದ 7-8 ವರ್ಷಗಳಿಂದ ಯಾವುದೇ ಮಂತ್ರಿಗಳಿಗೆ ಈ ಪ್ರಶ್ನೆಯನ್ನು ಕೇಳಿದರೂ ಸಹ ಇದೇ ತರಹದ ಉತ್ತರ ಬರುತ್ತಿದೆ. ತಮಗೆ ಗೊತ್ತಿರುವ ಹಾಗೆ ಕೊನೇ ಪಕ್ಷ ಕನಿಷ್ಠ ಮೂವತ್ತು ರೂಪಾಯಿಗಳನ್ನಾದರೂ ದಿನಗೂಲಿಯಾಗಿ ಕೊಡದೆಹೋದರೆ ಅವರು ಹೇಗೆ ಜೀವನ ನಡೆಸುತ್ತಾರೆ? ದಿನಗೂಲಿ ಮಾಡುವ ನೌಕರರು ಬೆಂಗಳೂರಿನ ಬನಶಂಕರಿಯಲ್ಲಿರುವ ಕೊಳಚೆ ಪ್ರದೇಶದಲ್ಲಿ ವಾಸವಾಗಿರುತ್ತಾರೆಂದು ಇಟ್ಟುಕೊಳ್ಳೋಣ. ಅವರು ಅಲ್ಲಿಂದ ಜಯಮಹಲ್ಗೆ ಬಂದು ಕೆಲಸ ಮಾಡಿಕೊಂಡು ಪುನಃ ಮನೆಗೆ ಹೋಗಬೇಕಾದರೆ 5-6 ರೂಪಾಯಿಗಳಷ್ಟಾದರೂ ಬಸ್ ಚಾರ್ಜ್ ಆಗುತ್ತದೆ. ಹೋಟೆಲ್ನಲ್ಲಿ ಒಂದು ಕಾಫಿ:ಟೀ ಕುಡಿಯಬೇಕೆಂದರೆ ಎರಡು ರೂಪಾಯಿಯಾಗುತ್ತದೆ. ಇವರಿಗೆ ಕೊಡತಕ್ಕಂಥ ದಿನಗೂಲಿಯಲ್ಲಿ ಇವರು ಜೀವನ ಮಾಡುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ದಯವಿಟ್ಟು ಯೋಚಿಸಿ. ಇನ್ನು 15-20 ವರ್ಷಗಳ ಕಾಲ ದಿನಗೂಲಿ ಮಾಡಿ ದುಡಿದವರು ತಮ್ಮ ಹೆಂಡತಿ ಮಕ್ಕಳನ್ನು ಹೇಗೆ ಸಾಕುತ್ತಾರೆ? ಈಗ ತೋಟಗಾರಿಕೆ ಸಹಾಯಕರ ಹುದ್ದೆಗೆ ಕನಿಷ್ಠ ಪ್ರಮಾಣದ ಅರ್ಹತೆಯಾಗಿ ಎಸ್ಎಸ್ಎಲ್ಸಿಯಲ್ಲಿ ಉತ್ತೀರ್ಣರಾಗಿರಬೇಕೆಂದು ಹೇಳಿದ್ದೀರಿ. ಅವರು ಎಸ್ಎಸ್ಎಲ್ಸಿಯನ್ನು ಪಾಸ್ ಮಾಡಿದ ತಕ್ಷಣ ಅವರಿಗೆ ತೋಟಗಾರಿಕೆ ಬಗ್ಗೆ ಸಂಪೂರ್ಣವಾದ ಮಾಹಿತಿ ಗೊತ್ತಿರುತ್ತದೆಯೇ? ನಾನು ಹೇಳುತ್ತೇನೆ: 10-15 ವರ್ಷವಲ್ಲ, ತೋಟಗಾರಿಕೆ ಇಲಾಖೆಯಲ್ಲಿ ಎರಡು ವರ್ಷ ಕೆಲಸ ಮಾಡಿರುವವರಿಗೆ ಎಸ್ಎಸ್ಎಲ್ಸಿ ಓದಿ ಪಾಸ್ ಮಾಡಿರುವವರಿಗಿಂಥ ಹೆಚ್ಚಿನ ಒಂದು ಮಾಹಿತಿ, ಅನುಭವ, ಪರಿಣತಿ ತೋಟಗಾರಿಕೆ ಬಗ್ಗೆ ಆತನಿಗೆ ಇರುತ್ತದೆ. ಆದುದರಿಂದ, ನಾನು ನಿಮ್ಮಲ್ಲಿ ಒತ್ತಾಯಪಡಿಸತಕ್ಕಂಥಾದ್ದು, ಏನೆಂದರೆ, ಪರಿಶೀಲಿಸುತ್ತೇನೆಂದು ಏನು ಉತ್ತರ ಕೊಟ್ಟಿದ್ದೀರಿ, ಇದು ನಿಮಗೆ ಸಲ್ಲತಕ್ಕದ್ದಲ್ಲ. ಇದರಿಂದ ಏನೂ ಉಪಯೋಗ ಇಲ್ಲ. ದಿನಗೂಲಿ ಕಾರ್ಮಿಕರು ಇವ್ಹೊತ್ತು ನಿಜವಾಗಿಯೂ ಬಹಳ ಕಷ್ಟದಲ್ಲಿದ್ದಾರೆ. ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರು ತೋಟಗಾರಿಕೆ ಹೆಸರಿನಲ್ಲಿ ಇನ್ನಿತರ ಏನೇನೋ ಕೆಲಸ ಮಾಡುತ್ತಿದ್ದಾರೆ, ಬೇರೆಯವರು ಅವರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ, ಅವರ ಶೋಷಣೆ ನಡೆಯುತ್ತಿದೆ. ಸರ್ಕಾರದ ಮಟ್ಟದಲ್ಲಿ ನಾವು ಕನಿಷ್ಠ ದಿನಗೂಲಿ ವೇತನವೆಂದು ರೂ. 18, ರೂ. 24 ಮತ್ತು ರೂ. 36 ಎಂದು

ನಿಗದಿ ಮಾಡುತ್ತೇವೆ. ಆ ರೀತಿ ನಿಗದಿಪಡಿಸಿದ ವೇತನವನ್ನು ಇವರಿಗೆ ಕೊಡಲಿಲ್ಲವೆಂದರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಮಂತ್ರಿಗಳಾಗಿರತಕ್ಕಂಥ ಈ ಸಂದರ್ಭದಲ್ಲಿ ಅವರಿಗೆ ತಿಳಿಸುವುದೇನೆಂದರೆ, ತೋಟಗಾರಿಕೆ ಇಲಾಖೆಯಲ್ಲಿ ಸುಮಾರು 2-3 ಸಾವಿರ ಜನರು 15-20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕನಿಷ್ಠ ವೇತನವನ್ನೂ ಸಹ ಕೊಡುವುದಿಲ್ಲ. ಅವರಿಗೆ ತಿಂಗಳಿಗೆ ರೂ. 400, ರೂ. 500 ಕೊಟ್ಟರೆ ಅವರು ಜೀವನ . ಹೇಗೆ ನಡೆಸುತ್ತಾರೆ?

ಅವರು ಬನಶಂಕರಿ ಇಲ್ಲವೇ ಮುನಿರೆಡ್ಡಿಪಾಳ್ಯದಲ್ಲಿರುವ ಕೊಳಚೆಗೇರಿಗಳಲ್ಲಿ ವಾಸಿಸುವಂಥವರು. ಅವರು ತಾವಿರುವ ಸ್ಥಳದಿಂದ ಮತ್ತೊಂದು ಕಡೆ ಹೋಗಿ ಕೆಲಸ ಮಾಡಬೇಕೆಂದರೆ ಬಸ್ ದರ 7-8 ರೂಪಾಯಿಗಳಾಗುತ್ತದೆ. ಇನ್ನು ಹೇಗೆ ಜೀವನ ನಡೆಸುತ್ತಾರೆ? ಆದುದರಿಂದ, ಅವರನ್ನು ಖಾಯಂಗೊಳಿಸಬೇಕು. ಅದಕ್ಕಿಂಥ ಹೆಚ್ಚಾಗಿ ಅವರು ತಮ್ಮ ಜೀವನ ನಡೆಸುವುದಕ್ಕಾಗಿ ಅವರ ವೇತನದಲ್ಲಿ ಸ್ವಲ್ಪವಾದರೂ ಅನುಕೂಲ ಮಾಡಿಕೊಡಬೇಕೆಂಬ ಬಗ್ಗೆ ಮಾನ್ಯ ಕೃಷ್ಣಪ್ಪನವರು ಭರವಸೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, ದಿನಗೂಲಿ ಕಾರ್ಮಿಕರ ಬಗ್ಗೆ ಮಾನ್ಯ ಸದಸ್ಯರಿಗಿರುವಷ್ಟೆ ಕಳಕಳಿ ನಮಗೂ ಇದೆ. ಆದರೆ, ಅಂಕಿ-ಸಂಖ್ಯೆಗಳನ್ನು ಹೇಳಿ ಅಂತಹವರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿಲ್ಲವೆಂದು ಹೇಳುವುದು ಅಷ್ಟು ಸರಿಯಲ್ಲ. ತಮಗೆ ಈಗಾಗಲೇ ತಿಳಿಸಿರುವಂತೆ ತೋಟಗಾರಿಕೆ ಇಲಾಖೆಯಲ್ಲಿ ಒಟ್ಟು 1834 ಜನರ ಪೈಕಿ 1794 ಜನರನ್ನು ಖಾಯಂ ನೌಕರರನ್ನಾಗಿ ಮಾಡಲಾಗಿದೆ. ಈಗ ಇಲಾಖೆಯಲ್ಲಿ ಉಳಿದುಕೊಂಡಿರುವವರು 340 ಜನರು ಮಾತ್ರ. ಇವರನ್ನು ಖಾಯಂಗೊಳಿಸುವ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ಇವರ ಬಗ್ಗೆ ಉದಾಸೀನ ಮಾಡತಕ್ಕಂಥಾದ್ದು ಏನೂ ಇಲ್ಲ. ಆದರೆ, ದಿನಗೂಲಿ ಕಾರ್ಮಿಕರಿಗೆ ಕೊಡುವಂಥ ಮೊತ್ತ ಏನಿದೆ, ಅದು ಸಾಲದು ಎಂದಿದ್ದೀರಿ. ಇದರ ಬಗ್ಗೆ ಇಡೀ ಎಲ್ಲಾ ಇಲಾಖೆಗೆ ಸಂಬಂಧಿಸಿದಂತೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಅಲ್ಲದೆ, ಇದು ನೀತಿಯ ಪ್ರಶ್ನೆಯಾಗಿರುವುದರಿಂದ ತಾವು ಮುಖ್ಯಮಂತ್ರಿಗಳ ಗಮನಕ್ಕೆ ತೆಂದಿದ್ದೀರಿ. ಕಡೆಯದಾಗಿ, ದಿನಗೂಲಿ ನೌಕರರು ಕೆಲಸ ಮಾಡುವುದಕ್ಕೆಂದು ಬಸ್ಸಿನಲ್ಲಿ ಪ್ರಯಾಣಿಸಿದರೆ 5-6ರೂಪಾಯಿಗಳು ಖರ್ಚಾಗುತ್ತದೆಂದು ಇದರಿಂದ ಅವರು ಜೀವನ ನಡೆಸಲು ತುಂಬಾ ಕಷ್ಟವಾಗುತ್ತದೆಂದು ಏನು ಹೇಳಿದ್ದೀರಿ, ಅದರ ಬಗ್ಗೆ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇವೆಂದು ತಮಗೆ ನಾನು ಭರವಸೆ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ತರಹ ಕೆಲಸ ಮಾಡುವವರು ಎಲ್ಲಾ ಇಲಾಖೆಗಳಲ್ಲೂ ಇದ್ದಾರೆ. ಅವರಿಗೆಲ್ಲಾ ಕನಿಷ್ಠ ವೇತನ ನಿಗದಿಪಡಿಸಬೇಕು. ಅಷ್ಟೊತ್ತಿಗೆ ನೀವು ಎರಡು ಬಾರಿ ಇತ್ತ ಕಡೆ (ವಿರೋಧ ಪಕ್ಷದವರಾಗಿ) ಬಂದಿರುತ್ತೀರಿ, ನಾವು ಎರಡು ಬಾರಿ ಆ ಕಡೆ (ಆಡಳಿತ ಪಕ್ಷದವರಾಗಿ) ಹೋಗಿರುತ್ತೇವೆ. ಆದುದರಿಂದ, ಬೇರೆ ಇಲಾಖೆಗಳ ಸುದ್ದಿ ನಿಮಗೆ ಬೇಡ. ತಮ್ಮ ಇಲಾಖೆಯಲ್ಲಿ ಇವರಿಗಾಗಿ ಯಾವುದಾದರೊಂದು ಸೇವಿಂಗ್ಸ್ ಮಾಡಿ ಇವರ ಜೀವನೋಪಾಯಕ್ಕೆ ಅನುಕೂಲ ಮಾಡಿಕೊಡಿ. ಇವ್ನೊತ್ತು ನಿಜವಾಗಿಯೂ ಲಾಲ್‌ಬಾಗಿನಲ್ಲಿ ಹೋಗಿ ಜನರು ಪುಷ್ಪ ಉದ್ಯಾನ ಮತ್ತು ಮರ-ಗಿಡಗಳನ್ನು ನೋಡುವುದಕ್ಕೆ ಸಾಧ್ಯವಾಗಿದ್ದರೆ ಅಥವಾ ನಮ್ಮ - ನಿಮ್ಮ ಮನೆಗಳ ಮುಂದೆ ಇನ್ನೂ ಮರ-ಗಿಡಗಳು ಉಳಿದಿದ್ದರೆ ಅದಕ್ಕೆ ಕಾರಣಕರ್ತರು ಈ ದಿನಗೂಲಿ ನೌಕರರೇ ಎನ್ನುವುದು ನಿಮಗೆ ಅರ್ಥವಾಗಿದೆ. ಅವರುಗಳು ಬೇರೆ ಕಡೆ ಹೋಗಿ ಎಲ್ಲೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರ ಟೈಮಿಂಗ್ಸ್ ತಮಗೆ ಗೊತ್ತಿದೆ. ಆದ್ದರಿಂದ ತಾವು ತಮ್ಮ ಇಲಾಖಾ ಸೇವಿಂಗ್ಸ್

ನಿಂದಲಾದರೂ ಅವರಿಗೆ ಮಾರ್ಚ್‌ನೊಳಗಾದರೂ ಸ್ವಲ್ಪ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಬೇರೆ ಇಲಾಖೆಯವರು ಇದನ್ನು ತೀರ್ಮಾನ ಮಾಡಬೇಕೆಂದು ತಾವು ಹೇಳಿದರೆ, ಅದು ಆಗದ ಕೆಲಸ, ಆ ಕೆಲಸ ಆಗುವುದೇ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ನಿಯಮ 334 ರ ಮೇರೆಗೆ

ಒಂದಂಕಿ ಲಾಟರಿಯನ್ನು ನಿಷೇಧಿಸುವ ಬಗ್ಗೆ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಸನ್ಮಾನ್ಯ ಅಧ್ಯಕ್ಷರೇ, ಒಂದಂಕಿ ಲಾಟರಿಯನ್ನು ನಿಷೇಧಿಸುವ ಬಗ್ಗೆ ಸರ್ಕಾರ ಹಿಂದೆಯೇ ಗಮನ ಹರಿಸಿದ್ದು ಈವರೆಗೂ ನಿಷೇಧಿಸಿರುವುದಿಲ್ಲ. ಇದರಿಂದ ಬಹಳಷ್ಟು ಸಂಸಾರಗಳು ಹಾಳಾಗಿವೆ ಹಾಗೂ ಹಾಳಾಗುತ್ತಿವೆ. ಸರ್ಕಾರ ಅಧಿಕೃತವಾಗಿ ನಿಷೇಧಾಜ್ಞೆಯನ್ನು ಜಾರಿ ಮಾಡದಿದ್ದಾಗ್ಯೂ ಪೋಲೀಸರ ಉದ್ದೇಶ ಎಷ್ಟೇ ಒಳ್ಳೆಯದಿದ್ದಾಗ್ಯೂ ಪೋಲೀಸ್ ಅಧಿಕಾರಿಗಳೇ ಕ್ರಮ ಕೈಗೊಳ್ಳುತ್ತಿರುವುದರಿಂದ ಹೆಚ್ಚಿನ ದುಷ್ಪರಿಣಾಮ ಆಗುತ್ತಿದೆ. ಆದ್ದರಿಂದ ಸರ್ಕಾರ ಅಧಿಕೃತವಾಗಿ ಒಂದಂಕಿ ಲಾಟರಿಯನ್ನು ನಿಷೇಧಿಸುವ ಹಾಗೂ ಒಂದಂಕಿ ಲಾಟರಿ ಮಾರಾಟ ಮಾಡುವವರನ್ನು ಪ್ರತಿಬಂಧಿಸುವ ಆಜ್ಞೆ ಹೊರಡಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ನಮ್ಮ ರಾಜ್ಯದ "ಮೈಸೂರು ಲಕ್ಷ್ಮಿ" ಒಂದಂಕಿ ಲಾಟರಿಯನ್ನು ಅದರ ದುಷ್ಪರಿಣಾಮವನ್ನು ಅರಿತು ದಿನಾಂಕ : 29.11.1992 ರಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ. ಭಾರತದ ಸಂವಿಧಾನದ ಅನುಚ್ಛೇದ 258(1)ರಲ್ಲಿ ರಾಷ್ಟ್ರಪತಿಯವರಿಗೆ ನೀಡಲಾದ ಪ್ರಾಧಿಕಾರದನ್ವಯ ರಾಜ್ಯ ಅಥವಾ ಕೇಂದ್ರ ಸರ್ಕಾರ ಲಾಟರಿಯನ್ನು ನಡೆಸುತ್ತಿರುವುದು.

ಲಾಟರಿಗಳಿಗೆ ಸಂಬಂಧಪಟ್ಟಂತೆ ಕಾನೂನು ರೂಪಿಸುವ ಅಧಿಕಾರ ಕೇವಲ ಸಂಸತ್ತಿಗೆ ಮಾತ್ರ ಇರುತ್ತದೆಯೆಂದೂ ಇದರ ಬಗ್ಗೆ ಕಾನೂನು ರೂಪಿಸುವ ಅಧಿಕಾರವನ್ನು ರಾಜ್ಯಗಳು ಹೊಂದಿರುವುದಿಲ್ಲವೆಂದೂ ಸರ್ವೋಚ್ಚ ನ್ಯಾಯಾಲಯ ತೀರ್ಪಿತ್ತಿದೆ. ಆದುದರಿಂದ ಒಂದು ರಾಜ್ಯದ ಲಾಟರಿ ಟಿಕೇಟುಗಳ ಮಾರಾಟವನ್ನು ಇನ್ನೊಂದು ರಾಜ್ಯ ಸರ್ಕಾರವು ನಿಷೇಧಿಸಲು ಅವಕಾಶವಿರುವುದಿಲ್ಲ. ಇದರಿಂದಾಗಿ, ನಾನು ಇತರೆ ರಾಜ್ಯಗಳ ಒಂದಂಕಿ ಲಾಟರಿಯನ್ನು ನಿಷೇಧಿಸುವ ಅಧಿಕಾರವನ್ನು ರಾಜ್ಯಕ್ಕೆ ನೀಡಬೇಕೆಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತೇನೆ.

(2) ಹಾಲು ಉತ್ಪಾದಕರುಗಳಿಗೆ ಹಣ ಪಾವತಿ ಮಾಡದೇ ಇರುವುದು

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಾದ್ಯಂತ ಸುಮಾರು ಐದುನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹಾಲಿನ ಉತ್ಪಾದಕರ ಸಹಕಾರ ಸಂಘಗಳಿದ್ದು ಈ ಹಾಲಿನ ಉತ್ಪಾದಕರ ಸಹಕಾರ ಸಂಘಕ್ಕೆ ಹಾಲಿನ ಉತ್ಪಾದಕರು ಹಾಲಿನ ಸರಬರಾಜು ಮಾಡಿದ್ದು, ಈ ಹಾಲಿನ ಉತ್ಪಾದಕರಿಗೆ ಕಳೆದ ಎಂಟರಿಂದ ಹತ್ತು ವಾರಗಳು ಹಾಲನ್ನು ಸರಬರಾಜು ಮಾಡಿರುವ ಹಣವೇ ಪಾವತಿಯಾಗದೇ ತೊಂದರೆಯಾಗಿದ್ದು, ರೈತರು ಸಮಸ್ಯೆಯಲ್ಲಿ ಸಿಲುಕಿದ್ದು ಮಂಡ್ಯ ಜಿಲ್ಲೆಯಾದ್ಯಂತ ತುಂಬಾ ಗಂಭೀರವಾದ ಪರಿಸ್ಥಿತಿ ಇದೆ.